ಅಸಲು ದಾವಾ ನಂ. 242/2021

ಪಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.16.09.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ ಎಸ್ ಎ ಜಿ ವಕೀಲರಿಂದಃ

ನನ್ನ ತಂದೆಗೆ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ತಮ್ಮ ತಂದೆಯ ತಂದೆಯಿಂದ ಬಂದಿರುವ ಆಸ್ತಿ ಸರ್ವೆ ನಂಬರ ಕೇಳಲಾಗಿ 148/1 ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ನನ್ನ ಅಜ್ಜನ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಬಿಯಾಮಾರವರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಅಜ್ಜಿ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಬಿಯಾಮಾರವರಿಗೆ ಮಕ್ಕಳು ಇದ್ದಿರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯನ್ನು ದತ್ತಕ್ ಪಡೆದುಕೊಂಡಿದ್ದರು ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ತಮ್ಮ ತಂದೆ ದತ್ತಕ್ ಹೋಗಿದ್ದರ ಕುರಿತು ಏನಾದರೂ ದಾಖಲಾತಿಗಳು ಇರುತ್ತವೆಯೇ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಬಿಯಾಮಾ ತನ್ನ ಜೀವಿತಾವಧಿಯಲ್ಲಿ ತಾವು ಖರೀದಿ ಮಾಡಿರುವ ಆಸ್ತಿಯು ಅಬುಸಾಬ ನದಾಪ ಮತ್ತು ನಬಿಸಾಬ ನದಾಪರವರಿಗೆ ಮೃತ್ಯು ಪತ್ರ ಬರೆದಿದ್ದರು ಎಂದರೆ ಸದರಿಯವರು ಆಸ್ತಿ ನನ್ನ ತಂದೆಗೆ ಬಿಟ್ಟುಕೊಟ್ಟಿದ್ದರು ಎಂದು ನುಡಿದಿರುತ್ತಾರೆ.

ನನ್ನ ಅಜ್ಜಿ ಆಸ್ತಿಯನ್ನು ಮೃತ್ಯು ಬರೆದುಕೊಟ್ಟ ಮೇರೆಗೆ ಡ ನಂಬರ 3189 ಮಂಜೂರಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜಿಯಾದ ಬಿಯಾಮರವರು 1977 ರಲ್ಲಿ

ಮೃತಪಟ್ಟಿರುತ್ತಾರೆ ಎಂದರೆ ಸರಿ.  ನನ್ನ ಅಜ್ಜಿ ತೀರಿಕೊಂಡ ನಂತರ ಸರ್ವೇ ನಂಬರ 148/1 ರ ನಬಿಸಾಬ ನದಾಪ ಹಾಗೂ ಸರ್ವೇ ನಂಬರ 61,62,63 ಅಬುಸಾಬ ನದಾಪ ಇವರ ಹೆಸರಿಗೆ ಆಗಿರುತ್ತವೆ ಎಂದರೆ ಸರಿ.  ಡ ನಂಬರ 3656 ಎಂದು ದಾಖಲಾಗಿರುತ್ತವೆ ಎಂದರೆ ಸರಿ.  ನನ್ನ ತಂದೆ ಸರ್ವೇ ನಂಬರ 148/1 ಬಂದ ಕಾರಣ ಅದು ಡ 3657 ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಬಂದಿರುವ ನನ್ನ ಅಜ್ಜಿ ತೀರಿಕೊಂಡ ನಂತರ ಬಂದ ಆಸ್ತಿ ಸ್ವಂತ ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ತಮಗೆ ಎಷ್ಟು ಮದುವೆಗಳಾಗಿರುತ್ತವೆ ಎಂದರೆ ಸಾಕ್ಷಿ 2 ಮದುವೆ ಎಂದು ನುಡಿದಿರುತ್ತಾರೆ. ನನ್ನ ಮೊದಲ ಮದುವೆಗೂ ಸಹ ನನ್ನ ತಂದೆಯೇ ಖರ್ಚು ವ್ಯಚ್ಚ ಮಾಡಿದ್ದರು ಎಂದರೆ ಸರಿ. ನನ್ನ ಮೊದಲನೇ ಗಂಡ ಸುಟ್ಟಿಕೊಂಡು ಮೃತಪಟ್ಟಿರುತ್ತಾರೆ ಎಂದರೆ ಸರಿ.  ನನ್ನ ಎರಡನೇ ಮದುವೆಯನ್ನು ಸಹ ನನ್ನ ತಂದೆಯೇ ನೋಡಿ ಖರ್ಚು ವ್ಯಚ್ಚ ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆ ಹಾಗೂ ನನ್ನ ತಂಗಿಯ ಮದುವೆ  ಸಂಬಂಧವಾಗಿ ಸಾಲ ಆಗಿತ್ತು ಎಂದರೆ ಸರಿ.

ನನ್ನ ತಂದೆ ಕುಷ್ಟ ರೋಗದಿಂದ ಅವರು ಹಾಸಿಗೆ ಹಿಡಿದಿದ್ದರು ಎಂದರೆ ಸರಿ. ಅವರು ಇರುವವರೆಗೆ ಪ್ರತಿವಾದಿ 1 ಮತ್ತು 3 ನೇ ಪ್ರತಿವಾದಿಯರು ನೋಡಿಕೊಂಡಿರುತ್ತಾರೆ ಎಂದರೆ ಸರಿ.  ನಬಿಸಾಬ ಅವರಿಗೆ ಊರಿಬೆ ಬರಕೂಡದ ಕಾರಣ ಹೊಲದಲ್ಲೆ ಶೆಡ್ ಹಾಕಿಕೊಂಡು ವಾಸವಾಗಿದ್ದರು ಎಂದರೆ ಸರಿ.

**ಮುಂದುವರೆ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲವಕಾಶ ನೀಡಿ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.